ಇ) ಸದರಿ ಜಮೀನು ಅವರಿಗೆ ಯಾವ ರೀತಿಯಿಂದ ಹಸ್ತಾಂತರವಾಗಿದೆ (ಮುಟೇಶನ ಎಂಟ್ರಿಯ ದಾಖಲೆ ಒದಗಿಸುವುದು);

ಈ) ಈ ಬಗ್ಗೆ ಸ್ಥಳೀಯ ಜನರ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಭಟ್ಕಳ ತಾಲ್ಲೂಕಿನ ಕರಿಕಲ್ ಗ್ರಾಮದಲ್ಲಿ ಯಾವುದೇ ಖಾಸಗಿ ಸಂಸ್ಥೆಯವರಿಗೆ ಶಾಲೆ ಪ್ರಾರಂಭಿಸಲು ಜಮೀನು ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಭಟ್ಕಳ ನಗರದಲ್ಲಿ ಮಂಜೂರು ಮಾಡಿರುವ ಹಂಗಾಮಿ ಲಾಗಣಿ ಜಮೀನು.

166(122) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ನಗರದಲ್ಲಿ ಇಲ್ಲಿಯವರೆಗೆ ಮಂಜೂರು ಮಾಡಿರುವ ಹಂಗಾಮಿ ಲಾಗಣಿ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಹಂಗಾಮಿ ಲಾಗಣಿ ಜಮೀನಿನ ಪಟ್ಟಾ ಕೊಡುವಲ್ಲಿ ಇಲಾಖೆ ಅನುಸರಿಸುತ್ತಿರುವ ನಿಯಮಗಳು ಯಾವುವು;

ಇ) ಹಂಗಾಮಿ ಲಾಗಣಿ ಜಮೀನಿನ ಪಟ್ಟಾ ಕೊಡುವಾಗ ಕಂದಾಯ ಇಲಾಖೆಯ ಜಮೀನಿಗೆ ಒಂದೇ ರೀತಿಯ ನಿಯಮಗಳಿವೆಯೇ;

ಈ) ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ಭಟ್ಕಳ ಹಂಗಾಮಿ ಲಾಗಣಿ ಜಮೀನು ಮಂಜೂರು ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಭಟ್ಕಳ ನಗರದಲ್ಲಿ (ಸೂಸಗಡಿ ಗ್ರಾಮದಲ್ಲಿ) ಹಂಗಾಮಿ ಲಾಗಣಿ ಜಮೀನು ಮಂಜೂರಿ ಮಾಡಿದ್ದು ಇರುವುದಿಲ್ಲ. ಭಟ್ಕಳ ತಾಲ್ಲೂಕಿನಲ್ಲಿ ಹಂಗಾಮಿ ಲಾಗಣಿ ಜಮೀನು ಮಂಜೂರಿ ಆಗಿದ್ದು ಸರ್ಕಾರದ ಆದೇಶ ಕ್ರ:ಆರ್‌ಡಿ:31:ಎಲ್‌ಜಿಎನ್:87 (ಭಾಗ) ದಿನಾಂಕ:20-4-94ರ ಪ್ರಕಾರ ಒಟ್ಟು 1023 ಎಕರೆ ಜಮೀನು ಖಾಯಂ ಲಾಗಣಿ ಮಾಡಿದ್ದು ಇರುತ್ತದೆ.

ಅ) ಹಂಗಾಮಿ ಲಾಗಣಿ ಜಮೀನಿಗೆ ಈಗ ಪಟ್ಟಾ ಕೊಟ್ಟಿದ್ದು ಇರುವುದಿಲ್ಲ, ಸರ್ಕಾರದ ಆದೇಶ ಸಂ: ಆರ್‌ಡಿ:31:ಎಲ್‌ಜಿಎನ್:87 (ಭಾಗ) ದಿನಾಂಕ: 20-4-94ರ ಪ್ರಕಾರ ಜಿಲ್ಲಾಧಿಕಾರಿಗಳು ಖಾಯಂ ಲಾಗಣಿ ಆದೇಶ ಮಾಡಿದ ನಂತರ ಖಾಯಂ ಲಾಗಣಿದಾರರಿಂದ ಮಾಲ್ಕಿ ಆಕಾರ ಮೋಜಣಿ ಫೀ ಮಸೂಲಿ ಮಾಡಿ ಖಾಯಂ ಲಾಗಣಿ ಪಟ್ಟಾ ಕೊಡಲಾಗಿರುತ್ತದೆ.

ಇ) ಹಂಗಾಮಿ ಲಾಗಣಿ ಜಮೀನು ಸರ್ಕಾರದ ಆದೇಶದಂತೆ ಖಾಯಂ ಲಾಗಣಿ ಆದೇಶ ಮಾಡಿದ ಜಮೀನಿಗೆ ಭೂ ಮಂಜೂರಾತಿ ನಿಯಮದನ್ವಯ ಕಂದಾಯ ಇಲಾಖೆ ಜಮೀನಿನಂತೆ ಕ್ರಮ ಜರುಗಿಸಲಾಗಿದೆ. ಇವೆರಡು ಜಮೀನಿಗೆ ಒಂದೇ ನಿಯಮಗಳಿರುತ್ತವೆ.

ಈ) ಹಂಗಾಮಿ ಲಾಗಣಿ ಜಮೀನು 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ಬರುವ ಪೂರ್ವ ಅರಣ್ಯ ಇಲಾಖೆಯಿಂದ ಬಿಡುಗಡೆ ಆಗಿ ಕಂದಾಯ ಇಲಾಖೆಗೆ ಹಸ್ತಾಂತರವಾದ ಜಮೀನು ಇದ್ದು ಹಂಗಾಮಿ ಲಾಗಣಿ ಮಂಜೂರಿಯಾದ ಪ್ರಕರಣಗಳಲ್ಲಿ ಕಾಯಿದೆ ಲಾಗಣಿ ಆದೇಶ ಮಾಡಲು ಅರಣ್ಯ ಇಲಾಖೆ ಅನುಮತಿ ಅವಶ್ಯವಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಷಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು.

167(330) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಷಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) ರಾಜ್ಯದಲ್ಲಿ ಚಾಮರಾಜನಗರದಲ್ಲಿ ಸೇರಿದಂತೆ ವಿವಿಧ ಕಡೆ ಬೇರೆ ರಾಜ್ಯದವರು ಜಮೀನನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೀತಿ ಖರೀದಿ ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಯಾವುದೂ ಇರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರೀತಿ ಒಟ್ಟು 2977.05 ಎಕರೆ ಜಮೀನನ್ನು ಚಾಮರಾಜನಗರ ಜಿಲ್ಲೆಯಲ್ಲಿ ಖರೀದಿ ಆಗಿದೆ.